
ನಿಟ್ಟೂರು ಶ್ರೀನಿವಾಸರಾಯರೊಂದಿಗೆ ಪ್ರೊ. ಜಿ. ವೆಂಕಟಸುಬ್ಬಯ್ಯ

ತಮ್ಮನ್ನು ಬಿಡುಗಡೆ ಮಾಡುವಂತೆ ಅವರು ಹಿರಿಯ ಸಾಹಿತಿಗಳಾದ ಎ.ಆರ್. ಕೃಷ್ಣಶಾಸ್ತ್ರೀ, ಡಿ.ವಿ. ಗುಂಡಪ್ಪ, ವಿ. ಸೀತಾರಾಮಯ್ಯ ಮುಂತಾದವರಲ್ಲಿ ವಿನಂತಿಸಿಕೊಂಡರು. ಆಗೆಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿಗೆ ಚುನಾವಣೆಯು ನಡೆಯುತ್ತಿರಲಿಲ್ಲ. ಈ ವಿಚಾರವನ್ನು ಚರ್ಚಿಸಲು ಮಾಸ್ತಿಯವರ ಮುಂದಾಳತ್ವದಲ್ಲಿ ಹಿರಿಯ ಸಾಹಿತಿಗಳು ಸಭೆಸೇರಿ ಮಾತುಕತೆ ನಡೆಸಿದರು. ಅವರ ಜೊತೆಗೆ ಅನಕೃ, ತಿ.ತಾ. ಶರ್ಮ, ಜಿ. ವೆಂಕಟಸುಬ್ಬಯ್ಯ ಮುಂತಾದವರೂ ಇದ್ದರು. ಅವರೆಲ್ಲ ಒಮ್ಮತದಿಂದ ಪರಿಷತ್ತಿನ ಅಧ್ಯಕ್ಷತೆಗೆ ಆಗ ಗೌರವ ಕಾರ್ಯದರ್ಶಿಗಳಾಗಿದ್ದ ಎ.ಎನ್. ಮೂರ್ತಿರಾಯರನ್ನು ನೇಮಕ ಮಾಡಲು ತೀರ್ಮಾನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿದ್ದ ಮೂರ್ತಿರಾಯರು ಆಗ ಎರವಲು ಸೇವೆಯಲ್ಲಿ ಮೈಸೂರು ಸರ್ಕಾರವು ಸ್ಥಾಪಿಸಿದ್ದ ಸಂಸ್ಕೃತಿ ಇಲಾಖೆಗೆ ಮುಖ್ಯಸ್ಥರಾಗಿ ಬಂದು ಬೆಂಗಳೂರಿನಲ್ಲಿದ್ದರು. ಹಿರಿಯರ ಮಾತಿಗೆ ಕಟ್ಟುಬಿದ್ದು ಮೂರ್ತಿರಾಯರು ಅಧ್ಯಕ್ಷರಾಗಲು ಒಪ್ಪಿಕೊಂಡರು. ಅವರು ಎಲ್ಲಾ ಹಿರಿಯರೊಡನೆ ಚರ್ಚಿಸಿ ಜಿ. ವೆಂಕಟಸುಬ್ಬಯ್ಯ ಅವರನ್ನು ಗೌರವ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿಕೊಂಡರು. (ಇವರೊಂದಿಗೆ ಅಲ್ಲಿಯವರೆವಿಗೂ ಗೌರವ ಕೋಶಾಧಿಕಾರಿಯಾಗಿದ್ದ ಹಿರಿಯರಾದ ಡಿ.ಸಿ. ಸುಬ್ಬರಾಯಪ್ಪ ಅವರನ್ನು ಮತ್ತೊಬ್ಬ ಗೌರವ ಕಾರ್ಯದರ್ಶಿಯಾಗಿ, ಎನ್. ವರದರಾಜನ್ ಅವರನ್ನು ಗೌರವ ಕೋಶಾಧಿಕಾರಿಯಾಗಿ ಆಯ್ಕೆಮಾಡಿಕೊಂಡರು.)

ಮೂರ್ತಿರಾಯರು ಸಂಸ್ಕೃತಿ ಇಲಾಖೆಯ ಕೆಲಸದ ನಿಮಿತ್ತ ರಾಜ್ಯದಲ್ಲೆಲ್ಲ ಪ್ರವಾಸ ಕೈಗೊಳ್ಳಬೇಕಾಗುತ್ತಿತ್ತು; ಆ ಸಂದರ್ಭದಲ್ಲಿ ಅವರಿಗೆ ಪರಿಷತ್ತಿನ ಕಾರ್ಯವನ್ನು ನೋಡಿಕೊಳ್ಳಲು ಆಗುತ್ತಿರಲಿಲ್ಲ. ಅಲ್ಲದೆ ತಮಗೆ ಆಪ್ತವಾಗಿದ್ದ ಅಧ್ಯಾಪಕವೃತ್ತಿಗೆ ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಲು ಸರ್ಕಾರಕ್ಕೆ ತಮ್ಮ ಕೋರಿಕೆಯನ್ನು ಸಲ್ಲಿಸಿದ್ದರು.

ಸ್ವಲ್ಪ ಸಮಯದ ಅನಂತರ ಮೂರ್ತಿರಾಯರು ತಮ್ಮನ್ನು ಅಧ್ಯಕ್ಷ ಸ್ಥಾನಕ್ಕೆ ಒಪ್ಪಿಸಿದ್ದ ಹಿರಿಯರನ್ನು ಭೇಟಿಯಾಗಿ ತಾವು ಬೆಂಗಳೂರಿನಿಂದ